

ಫೆಲಿಕ್ಸ್ ಚಿತ್ರಿಸಿದ ಗಾಂಧಿ ಅವಸಾನ ಕಲಾಕೃತಿಯ ಮರುಸೃಷ್ಟಿ

ಮಹಾತ್ಮ ಗಾಂಧಿಯವರು ತಮ್ಮ ಸಹಿಯನ್ನು ಹಾಕಿರುವುದು ವಿಶೇಷ. ಧೀರೇನ್ ಮುಂಬೈಯಲ್ಲಿ 'ರೂಪಾಯತನ್' ಎಂಬ ಕಲಾಶಾಲೆಯನ್ನು ಸ್ಥಾಪಿಸಿ, ಅಲ್ಲಿ ಉಚಿತವಾಗಿ ಕಲಿಸುತ್ತಿದ್ದರು.

ಮೊದಲ ದಲಿತ ಕಲಾವಿದನೆಂದು ಉಲ್ಲೇಖಿಸಲಾಗಿರುವ ಛಗನ್ ಲಾಲ್ ಜಾಧವ್ (1903–1987) ಅವರ 1930ರ ಉಪ್ಪಿನ ಸತ್ಯಾಗ್ರಹ ಸಂದರ್ಭದ ಚಿತ್ರಗಳು ಬಹಳ ತಡವಾಗಿ ಬೆಳಕಿಗೆ ಬಂದಿವೆ. ಗುಜರಾತಿನ ಅಹಮದಾಬಾದಿನ ಕೋಚರಬ್‌ನಲ್ಲಿ ಮಹಾತ್ಮ ಗಾಂಧಿಯವರು ಅಂತ್ಯಜ ಮಕ್ಕಳಿಗಾಗಿ ಆರಂಭಿಸಿದ್ದ ರಾತ್ರಿಶಾಲೆಗೆ ತನ್ನ ಹನ್ನೆರಡನೇ ವಯಸ್ಸಿನಲ್ಲಿ ಸೇರಿ, ಕಲಿತ ಛಗನ್ ಲಾಲ್ ಜಾಧವ್, ಗಾಂಧಿಯವರ ಹಾರೈಕೆಯಿಂದ ಬೆಳವಣಿಗೆ ಕಂಡರು. ಗುಜರಾತಿನ ಮತ್ತಿಬ್ಬರು ಜನಪ್ರಿಯ ಕಲಾವಿದರಾದ ಕಾನು ದೇಸಾಯಿ ಮತ್ತು ರವಿಶಂಕರ್ ರಾವಲ್ ಅವರೊಂದಿಗೆ ಕಲಿತ ಛಗನ್ ಲಾಲ್, ಚಿತ್ರಕಲಾವಿದನಾಗಿ ಜನಪ್ರಿಯರಾದರು. ಉಪ್ಪಿನ ಸತ್ಯಾಗ್ರಹದ ಆಕರ್ಷಣೆಗೆ ಒಳಗಾಗಿ, ಆ ಸಂದರ್ಭದ ಮತ್ತು ನಂತರದಲ್ಲಿ ಗಾಂಧಿಯವರ ಆಂತರ್ಯ ಗ್ರಹಿಸಿದ ಹಲವು ಅಪರೂಪದ ಭಾವಚಿತ್ರಗಳನ್ನು ಚಿತ್ರಿಸಿದ್ದಾರೆ. 'ದಂಡಿ ಯಾತ್ರೆ'ಯ ಗಾಂಧಿಯವರ ವಿಶ್ರಾಂತಿ ಸಂದರ್ಭದ ರೇಖಾಚಿತ್ರಗಳು ಈ ದೃಷ್ಟಿಯಿಂದ ಗಮನಾರ್ಹ. ಗಾಂಧಿಯವರ ಸಹಿಗಳು ಈ ಚಿತ್ರಗಳ ಮೇಲಿವೆ.

1948ರ ಜನವರಿ 30ರಂದು ಗಾಂಧಿಯವರ ಹತ್ಯೆಯಾದಾಗ ಬಹಳ ದಿನಗಳ ಕಾಲ ಕೋಣೆಯ ಬಾಗಿಲು ಮುಚ್ಚಿಕೊಂಡಿದ್ದ ಜಾಧವ್ ಹೊರ ಬರಲೇ ಇಲ್ಲ. ಆ ದಿನಗಳಲ್ಲಿ ತನ್ನ ಪೋಷಕ, ತಾನು ಆರಾಧಿಸುವ ಗಾಂಧಿಯವರ ಅಪಾರ ದುಃಖತಪ್ತ ರೂಪಗಳ ಚಿತ್ರಕೃತಿಗಳು ಸೃಷ್ಟಿಯಾದವು. ('ಅನ್ ಸೀನ್ ಡ್ರಾಯಿಂಗ್ಸ್ ಆಫ್ ದಂಡಿ ಮಾರ್ಚ್', ಡ್ರಾಯಿಂಗ್ಸ್ ಆಫ್ ಛಗನ್ ಲಾಲ್ ಜಾಧವ್, ಸಂಪಾದಕ: ರಿಜ್ವಾನ್ ಕದ್ರಿ, ಅಹಮದಾಬಾದ್, 2018.)

### 3

ಇಡೀ ವಿಶ್ವದ ಕಲಾವಿದರ ಕೌತುಕದ ಕಣ್ಣುಗಳನ್ನು ಆಕರ್ಷಿಸಿದವರು ಗಾಂಧಿ. ಇಂತಹ ವ್ಯಕ್ತಿತ್ವಕ್ಕೆ ಐಸಾಕ್ ನ್ಯೂಟನ್ ಅಚ್ಚರಿಗೊಂಡ ಹಾಗೆ, ವಿದೇಶಿ ಕಲಾವಿದರ ನೋಟಗಳು ಗಮನಾರ್ಹ. ವಿದೇಶಗಳ ಬಹುತೇಕ